**ದಿಃ 11.08.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಪಾಟೀ ಸವಾಲುಃ ವಾದಿ ಪರ ಶ್ರೀ ಕೆ ಪಿ ವಿ ಆರ್ ವಕೀಲರಿಂದಃ

ನಾನು ಸಿ.ಎ. ಪರೀಕ್ಷೆ ಯಾವಾಗ ಉತ್ತೀರ್ಣನಾಗಿದ್ದೇನೆ ಎಂದರೆ ಸಾಕ್ಷಿ ಜನವರಿ 2016 ಎಂದು ನುಡಿಯುತ್ತಾರೆ. ನಾನು ಪ್ರತಿವಾದಿ ಸಂಸ್ಥೆಯ ಪಾಲುದಾರ ಯಾವಾಗ ಆಗಿರುವುದು ಎಂದರೆ ಸಾಕ್ಷಿ ಸಿಎ ಪರೀಕ್ಷೆ ಉತ್ತೀರ್ಣ ಆಗುವ ಮೊದಲು ಎಂದು ನುಡಿಯುತ್ತಾರೆ. ನಾನು ಪಾಲುದಾರ ಸಂಸ್ಥೆಯಲ್ಲಿ ಪಾಲುದಾರನಾಗುವ ಮೊದಲು ಚಾರ್ಟರ್ಡ್ ಅಕೌಂಟೆಂಟ್ ಸಂಸ್ಥೆಯಿಂದ ಲಿಖಿತವಾಗಿ ಅನುಮಾತಿ ಪಡೆದಿದ್ದೇನಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಆ ರೀತಿ ಅನುಮತಿ ಯಾವಾಗ ಪಡೆದಿದ್ದೇನೆ ಎಂದರೆ ಸಾಕ್ಷಿ ಮೇ ಅಥವಾ ಜೂನ್ 2016 ಎಂದು ನುಡಿಯುತ್ತಾರೆ. ಸದರಿ ಅನುಮತಿ ಪತರ ನ್ಯಾಯಾಲಯಕ್ಕೆ ಹಾಜರುಮಾಡಬಹುದಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ.

ನನಗೆ ನಿಪಿ-4ರ ಶರ್ತುಗಳ ಬಗ್ಗೆ ಮಾಹಿತಿ ಇದೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತಾತರೆ. ನಿಪಿ-4 ಆಗುವ ಕಾಲಕ್ಕೆ ನಾನು ಪ್ರತಿವಾದಿ ಸಂಸ್ಥೆಯಲ್ಲಿ ಪಾಲುದಾರನಲ್ಲ ಎಂದರೆ ಸಾಕ್ಷಿ ಪಾಲುದಾರನಾಗಿದ್ದೆ ಎಂದು ನುಡಿಯುತ್ತಾರೆ. ನಿಪಿ-4 ನೊಂದಣಿ ಆಗಿದೆಯಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನಿಪಿ-4ರ ಪ್ರಕಾರ ಶಿವಾನಂದ ಭಟ್ ರವರಿಗೆ ಬಾಡಿಗೆ ಪಾವತಿ ಮಾಡುವಂತೆ ಅಧಿಕಾರ ನೀಡುವುದಿಲ್ಲ ಎಂದರೆ ಸಾಕ್ಷಿ 3ನೇ ಶರತ್ತು ಅಧಿಕಾರ ನೀಡುವುದಾಗಿ ನುಡಿಯುತ್ತಾರೆ.

ನಿಪಿ-4ನ್ನು ಹೊರತುಪಡಿಸಿ ನಮ್ಮ ಸಂಸ್ಥೆಯಲ್ಲಿ ಶಿವಾನಂದ ಭಟ್ ಇವರಿಗೆ ಬಾಡಿಗೆ ನೀಡುವಂತೆ ಬೇರೆ ದಾಖಲೆ ಇದೆಯಾ ಎಂದರೆ ಸಾಕ್ಷಿ ಇಲ್ಲ ಎಂದು

ನುಡಿಯುತ್ತಾರೆ. ವಾದಿ ಶಿವಾನಂದ ಭಟ್ ಇವರಿಗೆ ಬಾಡಿಗೆ ಪಡೆಯುವಂತೆ ಅಧಿಕಾರ ನೀಡಿರುವ ಯಾವುದಾದರೂ ಅಧಿಕಾರ ಪತ್ರ ಇದೆಯಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ವಾದಿಗೆ ನೀಡಬೇಕಾದ ಬಾಡಿಗೆ ಪಡೆಯುವ ಅಧಿಕಾರ ಶಿವಾನಂದ ಭಟ್ ಇವರಿಗೆ ಇಲ್ಲ ಎಂದರೆ ಸಾಕ್ಷಿ ಒಪ್ಪುವುದಿಲ್ಲ ಎಂದು ನುಡಿಯುತ್ತಾರೆ. ನಾನು ಯಾವ ಆಧಾರದಲ್ಲಿ ಒಪ್ಪುವುದಿಲ್ಲ ಎಂದು ಹೇಳುತ್ತಿದ್ದೇನೆ ಎಂದರೆ ಸಾಕ್ಷಿ ನಿಪಿ-4 ಮಾಲೀಕರಿಗೆ ಪ್ರತ್ಯೇಕವಾಗಿ ಬಾಡಿಗೆ ನೀಡಬೇಕು ಎಂದು ತಿಳಿಸಿರುವುದಿಲ್ಲ ಎಂದು ನುಡಿಯುತ್ತಾರೆ.

ನಾನು ಆದಾಯ ತೆರಿಗೆ ರಿಟರ್ನ್ಸ್ ನಲ್ಲಿ ವಾದಿಗೆ ನೀಡಬೇಕಾದ ಬಾಡಿಗೆ ಶಿವಾನಂದ ಭಟ್ ಇವರಿಗೆ ಪಾವತಿ ಮಾಡಿರುವುದಾಗಿ ತಿಳಿಸಿದ್ದೇನಾ ಎಂದರೆ ಸಾಕ್ಷಿ ಸದರಿ ನಿಯಮ ಆದಾಯ ತೆರಿಗೆ ಕಾನೂನಿನಲ್ಲಿ ಇಲ್ಲ ಎಂದು ನುಡಿಯುತ್ತಾರೆ. ನಾನು ವಾದಿಗೆ ಯಾವುದೇ ಬಾಡಿಗೆ ಪಾವತಿ ಮಾಡಿಲ್ಲ ಎಂದರೆ ಸಾಕ್ಷಿ ಸಂಸ್ಥೆಯಿಂದ ಪಾವತಿ ಮಾಡಿರುವುದಾಗಿ ನುಡಿಯುತ್ತಾರೆ.

ಬ್ಯಾಲೆನ್ಸ್ ಶೀಟ್ ನ ಪ್ರಕಾರ ಯಾವ ನಿಯಮದ ಪ್ರಕಾರ ಶಿವಾನಂದ ಇವರಿಗೆ ಬಾಡಿಗೆ ಪಾವತಿ ಮಾಡಬೇಕು ಎಂದು ಎಲ್ಲಿ ತಿಳಿಸಿದೆ ಎಂದರೆ ಸಾಕ್ಷಿ ಯಾವುದೇ ನಿಯಮ ಇರುವುದಿಲ್ಲ ಎಂದು ನುಡಿಯುತ್ತಾರೆ. ನಾನು ಕಾನೂನು ಬಾಹಿರವಾಗಿ ಶಿವಾನಂದ ಭಟ್ ಇವರಿಗೆ ಬಾಡಿಗೆ ಪಾವತಿ ಮಾಡಿದ್ದೇನೆ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

ನಿಡಿ-6 ರ ಬಗ್ಗೆ ನನ್ನ ಪ್ರತಿವಾದ ಪತ್ರದಲ್ಲಿ ತಿಳಿಸಿಲ್ಲ ಎಂದರೆ ಸಾಕ್ಷಿ ತಿಳಿಸಿರುವುದಾಗಿ ನುಡಿಯುತ್ತಾರೆ. ಸಾಕ್ಷಿಗೆ ಪ್ರತಿವಾದ ಪತ್ರ ತೋರಿಸಿ ಅದರಲ್ಲಿ ನಿಡಿ-6ರ ದಿನಾಂಕ ಹಾಗೂ ಸಂಖ್ಯೆ ನಮೂದಿಸಿಲ್ಲ ಎಂದರೆ ಸಾಕ್ಷಿ 72 ರಸೀದಿಗಳಿದ್ದು ಎಲ್ಲದರ ದಿನಾಂಕ ಹಾಗೂ ಸಂಖ್ಯೆ ನಮೂದು ಮಾಡಲು ಬರುವುದಿಲ್ಲ ಎಂದು ನುಡಿಯುತ್ತಾರೆ.

ನಿಡಿ-7(ಎ) ಪ್ರಕಾರ ನಾನು ರೂ.70,000/- ಪಾವತಿ ಮಾಡಿದ್ದು ಆದರೆ ರೂ.1,20,000/- ಪಾವತಿ ಮಾಡಬೇಕು ಎಂದರೆ ಸಾಕ್ಷಿ ತಮ್ಮ ಪಾಲುದಾರ ಸಂಸ್ಥೆ ಬಂದಿದ್ದು ಆಗಸ್ಟ್ 2015ರಲ್ಲಿ ಆ ಕಾರಣ 7 ತಿಂಗಳ ಕುರಿತು ಮಾತ್ರ ಪಾವತಿ ಮಾಡಿರುವುದು ಎಂದು ನುಡಿಯುತ್ತಾರೆ.

ನನಗೆ ಈ ದಾವೆಯಲ್ಲಿ ಸಾಕ್ಷಿ ಹೇಳುವಂತೆ ಉಳಿದ ಪಾಲುದಾರರು ಅಧಿಕಾರ ಪತ್ರ ನೀಡಿದ್ದಾರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನನಗೆ ಈ ದಾವೆಯಲ್ಲಿ ಪ್ರತಿವಾದಿ ಸಂಸ್ಥೆಯ ಪರವಾಗಿ ಸಾಕ್ಷಿ ನುಡಿಯುವ ಹಕ್ಕು ಇರುವುದಿಲ್ಲ ಎಂದರೆ ಸುಳ್ಳು. ನಿಡಿ-6 ರಸೀದಿಗಳು ಪ್ರಾಸಾ-1 ರವರ ಪಾಟೀ ಸವಾಲು ಆದ ನಂತರ ಸೃಷ್ಟಿ ಮಾಡಲಾಗಿದೆ

ಎಂದರೆ ಸುಳ್ಳು. ನಿಡಿ-6ನ್ನು ನಗರಸಭೆ ಅಧಿಕಾರಿಗಳ ಸಮಕ್ಷಮ ಹಾಜರುಮಾಡಿ ಅದರ ಬಗ್ಗೆ ಡಿಕ್ಲರೇಶನ್ ಮಾಡಿದ್ದೇನಾ ಎಂದರೆ ಸಾಕ್ಷಿ ತನಗೆ ಟ್ರೇಡ್ ಲೈಸೆನ್ಸ್ ಪ್ರತೀ ವರ್ಷ ಇರುವುದಾಗಿ ನುಡಿಯುತ್ತಾರೆ. ಸದರಿ ಕಟ್ಟಡದ ನಗರ ಸಭೆ ತೆರಿಗೆ ಯಾರು ಕಟ್ಟುತ್ತಾರೆ ಎಂದರೆ ಸಾಕ್ಷಿ ಮಾಲೀಕರು ಎಂದು ನುಡಿಯುತ್ತಾರೆ. ಸದರಿಯವರು ವಾದಿಯ ಅಥವಾ ಶಿವಾನಂದ ಭಟ್ ಇಬ್ಬರಲ್ಲಿ ಯಾರು ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಾನು ನಗರ ಸಭೆಯವರ ಸಮಕ್ಷಮ ಬಾಡಿಗೆ ನೀಡಿರುವ ವಿಚಾರವನ್ನು ಮರೆಮಾಚಿರುತ್ತೇನೆ ಎಂದರೆ ಸುಳ್ಳು..

ಶಿವಾನಂದ ಭಟ್ ರವರು ಸಹ ಪಾಲುದಾರಿಕಾ ಸಂಸ್ಥೆಯಲ್ಲಿ ಪಾಲುದಾರರು ಎಂದರೆ ನಿಜ. ನಾನು ಶಿವಾನಂದ ಭಟ್ ಇವರ ಜೊತೆ ಚೆನ್ನಾಗಿ ಇದ್ದೇನಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನಾನು ಶಿವಾನಂದ ಭಟ್ ಇವರ ಬಳಿ 2015 ರಿಂದ 2026ರವರೆಗೆ ವೆಂಕಟೇಶ ಭಟ್ ಇವರಿಗೆ ರೂ.5000/- ಪಾವತಿ ಮಾಡಿದ ಬಗ್ಗೆ ಪರಿಶೀಲನೆ ಮಾಡಿದ್ದೇನಾ ಎಂದರೆ ಸಾಕ್ಷಿ ಶಿವಾನಂದ ಭಟ್ ಹೇಳಿರುವುದಾಗಿ ನುಡಿಯುತ್ತಾರೆ. ನನಗೆ ಈ ದಾವೆಯಲ್ಲಿ ಶಿವಾನಂದ ಭಟ್ ಇವರ ವಿರುದ್ಧ ಡಿಕ್ರಿಯಾದರೆ ನನ್ನ ತಕರಾರು ಇಲ್ಲವಾ ಎಂದರೆ ಸಾಕ್ಷಿ ತಾನು ಹೇಳಲು ಬರುವುದಿಲ್ಲ ಎಂದು ನುಡಿಯುತ್ತಾರೆ. ನಾನು ಈ ದಾವೆಯ ಕುರಿತು ಕಾನೂನನ್ನು ಪರಿಶೀಲನೆ ಮಾಡಿದ್ದೇನಾ ಎಂದರೆ ಸಾಕ್ಷಿ ತಾನು ಕಾನೂನು ತಜ್ಞನಲ್ಲ ಎಂದು ನುಡಿಯುತ್ತಾರೆ. ಶಿವಾನಂದ ಭಟ್ ಇವರು ವೆಂಕಟೇಶ್ ಭಟ್ ಇವರಿಗೆ ಪಾವತಿ ಮಾಡಬೇಕಾದ ಬಾಡಿಗೆ ಹಣವನ್ನು ದುರುಪಯೋಗ ಮಾಡಿದ್ದಾರೆ ಎಂದರೆ ಸುಳ್ಳು. ನಾನು ಯಾವ ಆಧಾರದಲ್ಲಿ ದುರುಪಯೋಗ ಆಗಿಲ್ಲ ಎಂದು ಹೇಳುತ್ತಿದ್ದೇನೆ ಎಂದರೆ ಸಾಕ್ಷಿ ಕಟ್ಟಡದ ಮಾಲೀಕರು ಬಾಡಿಗೆ ಪಡೆದಿದ್ದಾರೆ ಎಂದು ನುಡಿಯುತ್ತಾರೆ.

ನಾನು ಶಿವಾನಂದ ಭಟ್ ಇವರನ್ನು ಈ ದಾವೆಯಲ್ಲಿ ಸಾಕ್ಷಿ ಮಾಡುತ್ತೇನಾ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಾನು ಸದರಿಯವರನ್ನು ಸಾಕ್ಷಿಯಾಗಿ ಮಾಡುವ ವಿಚಾರ ಇದೆಯಾ ಎಂದರೆ ಸಾಕ್ಷಿ ಮಾಡುವುದಾಗಿ ನುಡಿಯುತ್ತಾರೆ.

ವಾದಿ ಹಲವಾರು ಬಾರಿ ಬ್ಯಾಲೆನ್ಸ್ ಶೀಟ್ ನೀಡುವಂತೆ ಹಾಗೂ ಬಾಡಿಗೆ ನೀಡುವಂತೆ ಪತ್ರ ಬರೆದಿದ್ದರೂ ನಾನು ಬಾಡಿಗೆ ಅಥವಾ ಬ್ಯಾಲೆನ್ಸ್ ಶೀಟ್ ನೀಡಿರುವುದಿಲ್ಲ ಎಂದರೆ ಸಾಕ್ಷಿ ವಾದಿಯರೇ ಪಾಲುದಾರರಾದ ಕಾರಣ ಬ್ಯಾಲೆನ್ಸ್ ಶೀಟ್ ಕೊಡುವ ಪ್ರಶ್ನೆ ಬರುವುದಿಲ್ಲ ಎಂದು ನುಡಿಯುತ್ತಾರೆ. ನಮ್ಮ ಸಂಸ್ಥೆಯ ಅಕೌಂಟ್ಸನ್ನು ಯಾರು ನೋಡಿಕೊಳ್ಳುತ್ತಾರೆ ಎಂದರೆ ಸಾಕ್ಷಿ ಸಿಬ್ಬಂದಿಗಳಿದ್ದು ಅವರೇ

ನೋಡಿಕೊಳ್ಳುವುದಾಗಿ ನುಡಿಯುತ್ತಾರೆ. 2015 ರಿಂದ 2026ರವರೆಗೆ ನಾನು ವಾದಿಯ ಸಹಿಯನ್ನು ಉದ್ದೇಶಪೂರ್ವಕವಾಗಿ ಬ್ಯಾಲೆನ್ಸ್ ಶೀಟ್ ಗೆ ಪಡೆದಿರುವುದಿಲ್ಲ ಎಂದರೆ ಸಾಕ್ಷಿ ಬ್ಯಾಲೆನ್ಸ್ ಶೀಟ್‌ಗೆ ಒಬ್ಬ ಪಾಲುದಾರರು ಸಹಿ ಮಾಡಿದರೆ ಸಾಕು ಎಂದು ನುಡಿಯುತ್ತಾರೆ.

ಪಾಲುದಾರ ಸಂಸ್ಥೆಯ ಪ್ರತೀದಿನ ವ್ಯವಹಾರ ಯಾರು ನೋಡಿಕೊಳ್ಳುತ್ತಾರೆ ಎಂದರೆ ಸಾಕ್ಷಿ ಶಿವಾನಂದ ಭಟ್, ನರಹರಿ ಭಟ್ ಹಾಗೂ ವೆಂಕಟೇಶ್ ಭಟ್ ಎಂದು ನುಡಿಯುತ್ತಾರೆ. ವೆಂಕಟೇಶ್ ಭಟ್ ಇವರು ಸೋಮವಾರ ಪೇಟೆಯ ಖಾಯಂ ನಿವಾಸಿ ಎಂದರೆ ನಿಜ. ಆ ಕಾರಣ ವೆಂಕಟೇಶ್ ಭಟ್ ಪ್ರತೀದಿನದ ವ್ಯವಹಾರದಲ್ಲಿ ಹಾಜರಾಗುತ್ತಿದ್ದಾರೆ ಎಂದು ಸುಳ್ಳು ಸಾಕ್ಷಿ ನೀಡುತ್ತಿದ್ದೇನೆ ಎಂದರೆ ಸುಳ್ಳು. ಸಾಕ್ಷಿ ಮುಂದುವರಿದು ನುಡಿಯುತ್ತಾರೆ ಸದರಿಯವರು ಪತ್ರದಲ್ಲಿ ಆಕ್ಟಿವ್ ಪಾರ್ಟನರ್ ಆಗಿರುತ್ತಾರೆ ಎಂದು ನುಡಿಯುತ್ತಾರೆ. ಸದರಿಯವರು 2015 ರಿಂದ 2026ರವರೆಗೆ ಯಾವುದೇ ಪಾಲುದಾರರ ವ್ಯವಹಾರದಲ್ಲಿ ಭಾಗಿಯಾಗಿರುವುದಿಲ್ಲ ಎಂದರೆ ಸಾಕ್ಷಿ ಬಂದಿರುವುದಾಗಿ ನುಡಿಯುತ್ತಾರೆ. ಆ ರೀತಿ ಎಷ್ಟು ಬಾರಿ ಬಂದಿರುತ್ತಾರೆ ಎಂದರೆ ಸಾಕ್ಷಿ ತುಂಬಾ ಬಾರಿ ಎಂದು ನುಡಿಯುತ್ತಾರೆ. ನನಗೆ ಸದರಿಯವರು ಸಹಿ ಮಾಡಿರುವ ಯಾವುದಾದರೂ ಒಂದು ದಾಖಲೆ ಹಾಜರುಮಾಡಲು ಆಗುತ್ತದಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನಾನು ನೀಡಿರುವ ಪೂರ್ತಿ ಸಾಕ್ಷ್ಯ ಸುಳ್ಳಿನಿಂದ ಕೂಡಿದೆ ಎಂದರೆ ಸುಳ್ಳು. ನಾನು ಕಳೆದ 11 ವರ್ಷಗಳಿಂದ ಶಿವಾನಂದ ಭಟ್ ಇವರ ಜೊತೆ ಸೇರಿ ತಿಂಗಳಿಗೆ ರೂ.10000/- ಹಣ ದುರುಪಯೋಗ ಮಾಡಿಕೊಂಡಿದ್ದೇವೆ ಎಂದರೆ ಸುಳ್ಳು.

ಪಾಲುದಾರ ಸಂಸ್ಥೆ ಇಬ್ಬರು ಮಾಲಿಕರ ನಡುವೆ ಬೇಧಭಾವ ಮಾಡಲು ಬರುವುದಿಲ್ಲ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಪಾಲುದಾರ ಸಂಸ್ಥೆಗೆ ಒಬ್ಬರಿಗೆ ಮಾತ್ರ ಬಾಡಿಗೆ ನೀಡುವ ಅಧಿಕಾರ ಇಲ್ಲದೇ ಇದ್ದರೂ ನಾನು ಕಾನೂನು ಬಾಹಿರವಾಗಿ ಒಬ್ಬರಿಗೆ ಬಾಡಿಗೆ ಪಾವತಿ ಮಾಡಿದ್ದೇನೆ ಎಂದರೆ ಸುಳ್ಳು.

ಹಿಂದಿನ ನ್ಯಾಯಾಧೀಶರ ಆದೇಶದಂತೆ ರೂ.5000/- ಚೆಕ್ ನ್ನು ವಕೀಲರಿಗೆ ನೀಡಿದ್ದರೂ ನಾನು ಚೆಕ್ ನೋಡಿಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸುಳ್ಳು. ನಾನು ಬ್ಯಾಲೆನ್ಸ್ ಶೀಟ್ ನಲ್ಲಿ ತೋರೀಸಿರುವಂತೆ ವಾದಿಗೆ ಬಾಡಿಗೆಯು ಬಾಕಿ ನೀಡಲು ಬಾದ್ಯಸ್ಥ ಎಂದರೆ ಸುಳ್ಳು.

ಸಿಂಧೂರಿ ಟೆಕ್ಸ್‌ಟೈಲ್ಸ್ ಯಾರಿಗೆ ಸೇರಿದ್ದು ಎಂದರೆ ಸಾಕ್ಷಿ ಸದರಿ ಪ್ರಶ್ನೆ ಈ ಕೇಸಿಗೆ ಸಂಬಂಧಪಟ್ಟಿಲ್ಲ ಎಂದು ನುಡಿಯುತ್ತಾರೆ. ಸಿಂಧೂರಿ ಟೆಕ್ಸ್ ಟೈಲ್ಸ್ ವಾದಿಗೆ ಸೇರಿದ ಕಟ್ಟಡದಲ್ಲಿ ನಮ್ಮ ಬೋರ್ಡ್ ಹಾಕಿದ್ದೇವೆ ಎಂದರೆ ಸಾಕ್ಷಿ ತಮ್ಮ ಕುಟುಂಬದ ವ್ಯವಹಾರವಾದ ಕಾರಣ ಹೇಳಲು ಬರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಬೋರ್ಡ್ ಹಾಕಲು ಯಾರಿಂದ ಪರ್ಮಿಟ್ ಪಡೆದಿದ್ದೇವೆ ಎಂದರೆ ಸಾಕ್ಷಿ ಶಿವಾನಂದ ಭಟ್ ರವರಿಂದ ಎಂದು ನುಡಿಯುತ್ತಾರೆ. ವಾದಿಯಿಂದ ಬೋರ್ಡ್ ಹಾಕಲು ಅನುಮತಿ ಪಡೆದಿದ್ದೇನಾ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಾನು ವಾದಿಗೆ ಸೇರಿದ ಕಟ್ಟಡವನ್ನು ಅನುಮತಿ ಇಲ್ಲದೇ ಉಪಯೋಗಿಸುತ್ತಿದ್ದೇನೆ ಎಂದರೆ ಸಾಕ್ಷಿ ಸಿಂಧೂರಿ ಟೆಕ್ಸ್ ಟೈಲ್ ತನಗೆ ಸಂಬಂಧ ಇಲ್ಲ ಎಂದು ನುಡಿಯುತ್ತಾರೆ. ಸದರಿ ಸಿಂಧೂರಿ ಟೆಕ್ಸ್ ಟೈಲ್ ಹಾಗೂ ಶಿವಾನಂ ದ ಭಟ್ ಇವರಿಗೂ ಏನು ವ್ಯವಹಾರ ಇದೆ ಎಂದರೆ ನನಗೆ ಗೊತ್ತಿಲ್ಲ. ಎಷ್ಟು ಬಾಡಿಗೆ ಎಂದರೆ ನನಗೆ ಗೊತ್ತಿಲ್ಲ. ವಾದ ಪತ್ರದಲ್ಲಿ ಕೇಳಿರುವಂತೆ ನಮ್ಮ ಸಂಸ್ಥೆ ಬಾಡಿಗೆ ಹಣ ನೀಡಲು ಬಾದ್ಯಸ್ಥರು ಎಂದರೆ ಸುಳ್ಳು.

ಮರು ವಿಚಾರಣೆ ಇಲ್ಲ,

**ನನ್ನ ಉಕ್ತಲೇಖನ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಓ ಹೇ ಕೇ ಸ ಇದೆ.**

**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.,**
**ಬಂಟ್ವಾಳ.**